ಶ್ರೀ ಗೋವಿಂದ ಎಂ. ಕಾರಜೋಳ: ಸೇತುವೆಗಳನ್ನು ಕಟ್ಟ ಬಹುದೆಂದು KRDCL ಮತ್ತು ಲೋಕೋಪಯೋಗಿ ಇಲಾಖೆಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ.

ಶ್ರೀ ಮಾಲಿಕಯ್ಯ ವಿ.ಗುತ್ತೇದಾರ್: ಮಾನ್ಯ ಅಧ್ಯಕ್ಷರೆ, ಶಾಸಕರಿಗೆ ಕೊಟ್ಟು ಯೋಜನೆ ರೂಪಿಸಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ, ನಮ್ಮ ಶಾಸಕರ ಗಮನಕ್ಕೆ ತರದೇ ಎಲ್ಲಾ ಜಿಲ್ಲಾ ಪಂಚಾಯತ್‌ನವರೇ ಮಾಡುತ್ತಿದ್ದಾರೆ. ಕೇವಲ ನೀರಾವರಿ ಯೋಜನೆಗಳಿಗೆ ಕೊಡುತ್ತಿದ್ದಾರೆ. Water supplyಗೆ ಮಾತ್ರ ನಂಜುಂಡಪ್ಪ ವರದಿಯಲ್ಲಿ ಹಣ ಕೊಡುತ್ತಿದ್ದಾರೆ. ರಸ್ತೆ ಕಾಮಗಾರಿಗಳಿಗೆ ಕೊಡುತ್ತಿಲ್ಲ. ಹೀಗೇ ಆದರೆ ನಮ್ಮ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಆಗಲು ಸಾಧ್ಯವಾಗುವುದಿಲ್ಲ. ಸಾಕಷ್ಟು ರಸ್ತೆಗಳು ಹದಗೆಟ್ಟಿವೆ. ದಯವಿಟ್ಟು ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಬೇಕು.

ಶ್ರೀ ಗೋವಿಂದ ಎಂ ಕಾರಜೋಳ: ಎಲ್ಲಾ ಇಲಾಖೆಯಿಂದಲೂ SDP amount ಎನ್ನುವುದನ್ನು ಅನುದಾನದಲ್ಲಿ ಪ್ರತ್ಯೇಕವಾಗಿ ತೋರಿಸಿದ್ದೇವೆ. ಅದು ಪ್ರತ್ಯೇಕವಾದ fund. ಎಲ್ಲಾ ಇಲಾಖೆಯಿಂದಲೂ ಸರಿಸಮಾನವಾಗಿ ಖರ್ಚು ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಎಲ್ಲರಿಗೂ allow ಮಾಡಿದರೆ, ಅಲ್ಲಲ್ಲೇ ಇಡೀ ರಾಜ್ಯದ discussion ಚಾಲು ಆಗುತ್ತದೆ. ಅದಕ್ಕೆ ನಾನು allow ಮಾಡುವುದಿಲ್ಲ. ಮಾನ್ಯ ಪುಟ್ಟೇಗೌಡರೆ ತಾವು ಪ್ರಶ್ನೆಯನ್ನು ಕೇಳಿ.

ಕರ್ನಾಟಕ ನೀರಾವರಿ ನಿಗಮ ಕುರಿತು

41(194) ಶ್ರೀ ಪುಟ್ಟೇಗೌಡ ಸಿ.ಎಸ್(ಶ್ರವಣಬೆಳಗೊಳ)

ಅ) ಕರ್ನಾಟಕ ನೀರಾವರಿ ನಿಗಮದಲ್ಲಿರುವ ವಲಯಗಳೆಷ್ಟು; ಪ್ರತಿ ವಲಯಕ್ಕೆ ಕಳೆದ 3 ವರ್ಷಗಳಿಂದ ಒದಗಿಸಲಾಗಿರುವ ಅನುದಾನವೆಷ್ಟು? (ವರ್ಷವಾರು, ಲೆಕ್ಕ ಶೀರ್ಷಿಕೆವಾರು ಮಾಹಿತಿ ನೀಡುವುದು)

ಕರ್ನಾಟಕ ನೀರಾವರಿ ನಿಗಮ ನಿಯಮಿತದಡಿಯಲ್ಲಿ 7 ವಲಯಗಳ ವಿವಿಧ ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು, ವಲಯವಾರು ವರ್ಷವಾರು ಒದಗಿಸಿರುವ ಅನುದಾನದ ವಿವರಗಳು ಹೀಗಿವೆ:

(ರೂ. ಕೋಟಿಗಳಲ್ಲಿ)

ಕ್ರ.ಸಂ.	ವಲಯಗಳು	2006–07	2007–08	2008–09
1	ಬೆಳಗಾವಿ	627.98	572.64	817.37

2	ಶಿವಮೊಗ್ಗ	195.29	450.18	461.21
3	ಧಾರವಾಡ	203.69	145.90	182.79
4	ಸಿದ್ಧಾಪುರ	76.00	101.00	41.00
5	ಗುಲಬರ್ಗಾ	123.28	84.66	97.00
6	ಚಿತ್ರದುರ್ಗ	–	50.00	104.00
7	ಮುನಿರಾಬಾದ್	40.00	26.00	84.00

ಆ) ಕರ್ನಾಟಕ ನೀರಾವರಿ ನಿಗಮದ ವಲಯವಾರು 08–09 ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳು ಎಷ್ಟು ಮತ್ತು ಅವುಗಳ ಅಂದಾಜು ವೆಚ್ಚವೆಷ್ಟು; ಇದಕ್ಕಾಗಿ ಒದಗಿಸಲಾದ ಅನುದಾನವೆಷ್ಟು; ಈ ಅನುದಾನದಲ್ಲಿ 08–09 ರ ಸಾಲಿನ ಮಾರ್ಚ್ ಅಂತ್ಯದವರೆಗೆ ಖರ್ಚಾಗಿರುವ ಮೊತ್ತವೆಷ್ಟು; ಬಾಕಿ ಉಳಿದಿರುವ ಕಾಮಗಾರಿಗಳಿಗಾಗಿ ಅವಶ್ಯಕತೆಯಿರುವ ಅನುದಾನವೆಷ್ಟು; ಪ್ರಸ್ತುತ ಸಾಲಿನಲ್ಲಿ ಒದಗಿಸಲಾಗಿರುವ ಅನುದಾನವೆಷ್ಟು?

(ರೂ. ಕೋಟಿಗಳಲ್ಲಿ)

ವಲಯಗಳು	08–09 ರಲ್ಲಿ ಮಂಜೂರಾದ ಕಾಮಗಾರಿಗಳು (ಸಂಖ್ಯೆಗಳಲ್ಲಿ)	ಅಂದಾಜು ಮೊತ್ತ	ಒದಗಿಸಲಾದ ಅನುದಾನ	08–09ರ ಮಾರ್ಚ್ 2009 ರವರೆಗೆ ಖರ್ಚಾಗಿರುವ ಮೊತ್ತ	ಬಾಕಿ ಕಾಮಗಾರಿಗಳಿಗೆ ಅವಶ್ಯವಿರುವ ಅನುದಾನ	09–10 ನೇ ಸಾಲಿನಲ್ಲಿ ಒದಗಿಸಲಾಗಿರುವ ಅನುದಾನ
ಬೆಳಗಾವಿ	1319	1573.06	391.92	172.92	630.00	471.46
ಶಿವಮೊಗ್ಗ	554	1298.38	461.21	267.66	1466.95	433.54
ಧಾರವಾಡ	663	106.17	144.10	80.79	257.26	214.00
ಸಿದ್ಧಾಪುರ	108	228.30	41.00	65.03	35.97	163.00
ಗುಲಬರ್ಗಾ	1045	2272.80	97.00	95.97	573.95	132.50
ಚಿತ್ರದುರ್ಗ	3	5985.00	104.00	57.47	5927.53	100.00
ಮುನಿರಾಬಾದ್	2	64.00	64.00	14.11	12.29	35.00

ಶ್ರೀ ಪುಟ್ಟೇಗೌಡ ಸಿ.ಎಸ್.(ಶ್ರವಣಬೆಳಗೊಳ): ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ಏನಾಗಿದೆ ಎಂದರೆ, ನಾನು ಪ್ರಶ್ನೆ ಕೇಳಿದ್ದು ಬೇರೆ ಆದರೆ ಇಲ್ಲಿ ಪ್ರಿಂಟ್ ಆಗಿರುವುದೇ ಬೇರೆ, ಏಕೆಂದರೆ, ನಾನು ಕರ್ನಾಟಕ ರಾಜ್ಯ ನೀರಾವರಿ ನಿಗಮಗಳು ಎಷ್ಟು? ಅದಕ್ಕೆ ಕೊಡುತ್ತಿರುವ ಅನುದಾನವೆಷ್ಟು ಎಂದು ಪ್ರಶ್ನೆಯನ್ನು ಕೇಳಿದ್ದೆನು. ಆದರೆ, ಇಲ್ಲಿ ಏನಾಗಿದೆಯೆಂದರೆ, ಕರ್ನಾಟಕ ನೀರಾವರಿ ನಿಗಮಕ್ಕೆ ಮಾತ್ರ ಸೀಮಿತವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಒಟ್ಟಾರೆ ನನ್ನ ಭಾವನೆ ಏನೆಂದರೆ, ಮಾನ್ಯ ಬೊಮ್ಮಾಯಿ ಮತ್ತು ಮಾನ್ಯ ಯಡಿಯೂರಪ್ಪನವರ ಸರ್ಕಾರ ಬಂದ ಮೇಲೆ, ಮೈಸೂರು, ಮಂಡ್ಯ, ಹಾಸನ ಮತ್ತು ತುಮಕೂರು ಭಾಗದ ಜನರಿಗೆ, ಕಾವೇರಿ ವಲಯ ಏನಿದೆ, ಕಾವೇರಿ ನಿಗಮ ಏನಿದೆ ಬಹಳಷ್ಟು ಸೊನ್ನೆ ಸುತ್ತಿದ್ದೀರಿ. ಅಲ್ಲಿರುವ ನೌಕರರು ಸಂಬಳವನ್ನು ತೆಗೆದುಕೊಳ್ಳುತ್ತಿರುವುದನ್ನು ಬಿಟ್ಟರೆ, ಎಲ್ಲರೂ ಕೂಡ ಕೈಕಟ್ಟಿ ಕುಳಿತಿದ್ದಾರೆ. ನೀವು ಉತ್ತರದಲ್ಲಿ ಒಂದೊಂದು ವಲಯಕ್ಕೂ ಇಂತಿಷ್ಟು ದುಡ್ಡನ್ನು ಕೊಡಲಾಗಿದೆ ಎಂದು ತಿಳಿಸಿದ್ದೀರಿ. ಆದರೆ, ಖಂಡಿತವಾಗಿಯೂ ಅಷ್ಟು ದುಡ್ಡನ್ನು ಅವರು ಕೊಟ್ಟಿಲ್ಲ.

ಅಧ್ಯಕ್ಷರು: ತಾವು ವಿಷಯ ಪ್ರಸ್ತಾಪಿಸಿ, ಅವರು ಉತ್ತರ ಹೇಳಲಿ.

ಶ್ರೀ ಬಸವರಾಜ ಬೊಮ್ಮಾಯಿ: ಕರ್ನಾಟಕ ನೀರಾವರಿ ನಿಗಮದಲ್ಲಿರುವ ವಲಯಗಳೆಷ್ಟು? ನಮ್ಮ ನೀರಾವರಿ ನಿಗಮದಲ್ಲಿ ಎಷ್ಟು ವಲಯಗಳಿವೆಯೋ, ಅಷ್ಟಕ್ಕೂ ಉತ್ತರ ಕೊಟ್ಟಿದ್ದೇವೆ. ಅವರು ಕರ್ನಾಟಕದಲ್ಲಿರುವ ಎಲ್ಲಾ ನೀರಾವರಿ ನಿಗಮಗಳಲ್ಲಿರುವ ವಲಯಗಳೆಷ್ಟು ಎಂಬ ಪ್ರಶ್ನೆ ಕೇಳಿದ್ದರೆ, ಖಂಡಿತವಾಗಿಯೂ ಉತ್ತರ ಕೊಡುತ್ತಿದ್ದೆವು. ನೀವು ಯಾವ ತರಹ ಪ್ರಶ್ನೆ ಕೇಳಿದ್ದೀರೋ, ಆ ತರಹ ನಾವು ಉತ್ತರ ಕೊಟ್ಟಿದ್ದೇವೆ. ಆಯಿತು, ನಿಮಗೆ ಏನು ಉತ್ತರ ಬೇಕೋ, ಕೊಡೋಣ. ಎಲ್ಲಾ ವಲಯಗಳಿಗೆ ಸಂಬಂಧಿಸಿದಂತೆ ಉತ್ತರ ಕೊಡುತ್ತೇವೆ. ಅದು ಬಿಟ್ಟು ಅಲ್ಲಿ ಹಾಗಾಗಿದೆ, ಇಲ್ಲಿ ಹೀಗಾಗಿದೆ ಎಂದು ನೀವು ರಾಜಕೀಯ ಭಾಷಣ ಮಾಡಿದರೆ ಹೇಗೆ?

ಶ್ರೀ ಸಿ.ಎಸ್.ಪುಟ್ಟೇಗೌಡ: ಬೊಮ್ಮಾಯಿಯವರೆ, ನೀವು ಮಾಡುತ್ತಿರುವುದೂ ರಾಜಕೀಯ ಭಾಷಣವೇ, ನೀವು ಬೆಳಗ್ಗೆ ಮಾಡುತ್ತಿದ್ದೀರಲ್ಲ, ನೀವು ಊರೂರಿಗೆ ಹೋಗಿ ಮಾಡುತ್ತಿದ್ದೀರಲ್ಲ, ಟಿ.ಎ., ಡಿ.ಎ. ಭಾಷಣ, ಅದೂ ರಾಜಕೀಯ ಭಾಷಣವೇ. ನಾನೊಬ್ಬನೇ ಅಲ್ಲ ರಾಜಕೀಯ ಭಾಷಣ ಮಾಡಲು ಬಂದಿರುವುದು. ನೀವು ರಾಜಕೀಯ ಭಾಷಣವನ್ನೇ ಮಾಡುತ್ತಿರುವುದು. ನಾವು ಮಾತನಾಡಿದರೆ ಮಾತ್ರ ಅದು ರಾಜಕೀಯ ಭಾಷಣವಾಗುವುದಾದರೆ, ನೀವು ಮತ್ತು ನಿಮ್ಮ ಮುಖ್ಯಮಂತ್ರಿಗಳು ಊರು ತುಂಬಾ ಹೇಳಿಕೊಂಡು ಬರುತ್ತಿದ್ದೀರಲ್ಲ, ಅದು ರಾಜಕೀಯ ಭಾಷಣ ಅಲ್ಲವೇನು?

ಅಧ್ಯಕ್ಷರು: ಪುಟ್ಟೇಗೌಡರೇ, ಪ್ಲೀಸ್.

ಶ್ರೀ ಬಸವರಾಜ ಬೊಮ್ಮಾಯಿ: ಏಕೆ ಕೂಗಾಡುತ್ತೀರಿ ಸ್ವಾಮಿ? ಯಾವ್ಯಾವ ಕಾಲದಲ್ಲಿ ಏನೇನಾಗಿದೆ ಎಂಬುದು ಜನರಿಗೆ ಗೊತ್ತಿದೆ. ಮಾತನಾಡುವುದಕ್ಕೆ ನಿಮ್ಮೊಬ್ಬರಿಗೆ ಅಧಿಕಾರವಿಲ್ಲ ನಿಮ್ಮೊಬ್ಬರಿಗೇ ಭಾಷಣ ಮಾಡಲು ಬರುತ್ತದೆಯೇ?

ಅಧ್ಯಕ್ಷರು: ಪುಟ್ಟೇಗೌಡರೆ, ಪ್ಲೀಸ್, ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಸಿ.ಎಸ್.ಪುಟ್ಟೇಗೌಡ: ಹಳೆಯ ಕೆಲಸಗಳನ್ನೆಲ್ಲಾ ಪ್ರಿಂಟ್ ಹಾಕಿ ಊರು ತುಂಬಾ ಡೋಲು ಹೊಡೆಯುತ್ತಿದ್ದಾರಲ್ಲ, ಅದು ರಾಜಕೀಯ ಭಾಷಣ ಅಲ್ಲವೇನ್ರಿ? ಇದೇಯೇನ್ರಿ ನಿಮ್ಮ ಸಾಧನೆ? ನಿಮ್ಮ ಸಾಧನೆ ನೋಡಿ ಜನರು ನಾಚಿಕೆ ಪಡುತ್ತಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ: ಈ ಸದನದಲ್ಲಿ ಪ್ರಶ್ನೆ ಕೇಳಿ ಎಂದರೆ, ಭಾಷಣ ಮಾಡುತ್ತೀದ್ದೀರಲ್ಲ.

ಶ್ರೀ ಟಿ.ಬಿ.ಜಯಚಂದ್ರ: ಮೂಲ ಪ್ರಶ್ನೆ ಬದಲಾವಣೆಯಾಗಿದೆ.

ಅಧ್ಯಕ್ಷರು: ಜಯಚಂದ್ರರವರೆ, ಏನು ಸಮಸ್ಯೆಯಾಗಿದೆ ಎಂಬುದನ್ನು ಹೇಳಿ.

ಶ್ರೀ ಟಿ.ಬಿ.ಜಯಚಂದ್ರ: ಏನಾಗಿದೆ ಎಂದರೆ, ಪುಟ್ಟೇಗೌಡರು ಕೇಳುತ್ತಿರುವುದು, ನನ್ನ ಮೂಲ ಪ್ರಶ್ನೆ ಪ್ರಕಾರ, ಕಾವೇರಿ ಮತ್ತು ಕೃಷ್ಣಾ ಎರಡೂ...

ಅಧ್ಯಕ್ಷರು: ಪ್ರಶ್ನೆ ಕೇಳಿ.

ಶ್ರೀ ಟಿ.ಬಿ.ಜಯಚಂದ್ರ: ಪ್ರಶ್ನೆ ಪ್ರಿಂಟ್ ಆಗಿರುವುದು ತಪ್ಪಾಗಿದೆ ಎಂದು...

ಅಧ್ಯಕ್ಷರು: ಒರಿಜಿನಲ್ ಪ್ರಶ್ನೆ ಏನು ಕೇಳಿದ್ದಾರೆಂದು ನೋಡಬೆಕಲ್ಲವೇ?

ಶ್ರೀ ಸಿ.ಎಸ್.ಪುಟ್ಟೇಗೌಡ: ನಾನು ರಾಜ್ಯದಲ್ಲಿರುವ ನೀರಾವರಿ ನಿಗಮಗಳೆಷ್ಟು ಎಂದು ಪ್ರಶ್ನೆ ಕೇಳಿದ್ದೆ.

ಅಧ್ಯಕ್ಷರು: ಪುಟ್ಟೇಗೌಡರೆ, ಒಂದು ನಿಮಿಷ ತಡೆಯಿರಿ. ನಿಮ್ಮ ಪ್ರಶ್ನೆ ಇಲ್ಲಿದೆ ನೋಡಿ. ಕರ್ನಾಟಕ ನೀರಾವರಿ ನಿಗಮದಲ್ಲಿರುವ ವಲಯಗಳೆಷ್ಟು?....ನಿಮ್ಮ ಒರಿಜಿನಲ್ ಪ್ರಶ್ನೆ ಇಲ್ಲಿದೆ. ಕರ್ನಾಟಕ ನೀರಾವರಿ ನಿಗಮದಲ್ಲಿರುವ ವಲಯಗಳು...

ಶ್ರೀ ಸಿ.ಎಸ್.ಪುಟ್ಟೇಗೌಡ: ನಾನು ಅದನ್ನೇ ಹೇಳುತ್ತಿರುವುದು. ಪ್ರಿಂಟಾಗಿರುವುದು ತಪ್ಪಾಗಿದೆ. ನಾನು ರಾಜಕೀಯ ಭಾಷಣ ಮಾಡುತ್ತಿದ್ದೇನೆಂದು ಇವರು ಹೇಳಿದರಲ್ಲ, ಹಾಗಾದರೆ, ಇವರು ಏತಕ್ಕೆ ಇಲ್ಲಿಗೆ ಬಂದಿದ್ದಾರೆ? ನಾನು ಮೂರು ಸಲ ಅಸೆಂಬ್ಲಿಗೆ ಆಯ್ಕೆಯಾಗಿ ಬಂದಿದ್ದೇನೆ. ಇವರ ಅಪ್ಪನವರ ಜೊತೆ ನಾನು ಅಸೆಂಬ್ಲಿಯಲ್ಲಿ ಕುಳಿತಿದ್ದೇನೆ. ನಾನು ರಾಜಕೀಯ ಭಾಷಣ ಮಾಡುತ್ತೇನೆಂದರೆ...

ಅಧ್ಯಕ್ಷರು: ಬಿಡಿ, ಬಿಡಿ, ಇವೆಲ್ಲಾ ಈ ಸದನದಲ್ಲಿ ಮಾತನಾಡಬಾರದು, ನಿಮ್ಮ ಪ್ರಶ್ನೆ ಏನಿದೆ, ಅದಕ್ಕೆ ಉತ್ತರ....

ಶ್ರೀ ಬಸವರಾಜ ಬೊಮ್ಮಾಯಿ: ನಿಮ್ಮ ಒರಿಜಿನಲ್ ಪ್ರಶ್ನೆಯನ್ನು ಮೊದಲು ನೋಡಿಕೊಳ್ಳಿ. ನಿಮ್ಮ ಒರಿಜಿನಲ್ ಪ್ರಶ್ನೆ ಏನಿದೆ ಎಂಬುದನ್ನು ಹೇಳಿದ ಮೇಲೂ ಮತ್ತೆ ಅದನ್ನೇ ಮಾತನಾಡುತ್ತೀರಲ್ಲ. ನಿಮಗೆ ಆದೇಶ ಬಂದಿದೆ, ಮಾತನಾಡಿ, ಪರವಾಗಿಲ್ಲ. ನಮಗೂ ಗೊತ್ತಿದೆ.

ಶ್ರೀ ಸಿಎಸ್.ಪುಟ್ಟೇಗೌಡ: ನನಗೂ ಕಮಿಟ್‌ಮೆಂಟ್ ಇದೆ. ನಾನೂ ಜನರಿಂದ ಆರಿಸಿ ಬಂದವನಾಗಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ: ರೀ, ಸ್ವಾಮಿ. ಭಾಷಣವನ್ನು ನಾವೂ–ನೀವೂ ಹೊರಗಡೆ ಮಾಡೋಣ. ಮೊದಲು ಪ್ರಶ್ನೆ ಕೇಳಿ. ಒಳ್ಳೇ ಕತೆಯಾಯಿತಲ್ಲ.

ಅಧ್ಯಕ್ಷರು: ದಯವಿಟ್ಟು ತಾವೆಲ್ಲರೂ ಕುಳಿತುಕೊಳ್ಳಿ. ನೆಹರೂ ಓಲೇಕಾರ್, ಸಿದ್ದು ಸವದಿ, ವಲ್ಯಾಪುರೆರವರೆ, ಪ್ಲೀಸ್, ಕುಳಿತುಕೊಳ್ಳಿ. ನಾನು ಮಾನ್ಯ ಸದಸ್ಯರುಗಳಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಪ್ಲೀಸ್, ಎಲ್ಲರೂ ಕುಳಿತುಕೊಳ್ಳಿ. ಸಿದ್ದು ಸವದಿ, ಓಲೇಕಾರ್, ಕುಳಿತುಕೊಳ್ಳಿ. ನಾವು ಮಾತನಾಡುತ್ತೇವೆ, ತಾವು ಕುಳಿತುಕೊಳ್ಳಿ, ನಾವು ಉತ್ತರ ಕೇಳುತ್ತೇವೆ, ಸ್ಪಷ್ಟೀಕರಣ ಮಾಡುತ್ತೇವೆ. ಪ್ರಶ್ನೆ ಏನಿದೆ ಎಂಬುದನ್ನು ಕೇಳಿ ತಿಳಿದುಕೊಳ್ಳಿ.

ಶ್ರೀ ಹೆಚ್.ಡಿ.ರೇವಣ್ಣ: ಸಾರ್, ತಾವು ಒಂದು ಕೆಲಸ ಮಾಡಿ. ಪುಟ್ಟೇಗೌಡರು ಪ್ರಶ್ನೆ ಕೇಳುವಾಗ ಟೈಪಿಂಗ್ ಮಿಸ್ಟೇಕ್ ಆಗಿದೆ ಎಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ, ಪುಟ್ಟೇಗೌಡರ ಪ್ರಶ್ನೆಯನ್ನೂ ಸೇರಿಸಿಕೊಂಡು ಒಂದು ಗಂಟೆ ಕಾಲಾವಕಾಶದ ಚರ್ಚೆಗೆ ಅವಕಾಶ ಕಲ್ಪಿಸಿಕೊಡಿ.

ಅಧ್ಯಕ್ಷರು: ಏಕೆ ಒಂದು ಗಂಟೆ ಕಾಲಾವಕಾಶದ ಚರ್ಚೆ ಇಡಬೇಕು?

ಶ್ರೀ ಹೆಚ್.ಡಿ.ರೇವಣ್ಣ: ಈಗ ನೀರಾವರಿ ಸಚಿವರು ಸಮರ್ಥರಿದ್ದಾರೆ. ಅದಕ್ಕೋಸ್ಕರ, ಒಂದು ಗಂಟೆ ಕಾಲಾವಕಾಶದ ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ನಾನು ಹೇಳುತ್ತಿದ್ದೇನೆ. ಇದರ ಜೊತೆಗೆ ಪುಟ್ಟೇಗೌಡರು ಎರಡನೆಯ ಪ್ರಶ್ನೆ ಕೇಳಿದ್ದಾರೆ. "ಕರ್ನಾಟಕ ನೀರಾವರಿ ನಿಗಮದ ವಲಯವಾರು 2008–09ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳೆಷ್ಟು? ಮತ್ತು ಅವುಗಳ ಅಂದಾಜು ವೆಚ್ಚವೆಷ್ಟು? ಇದಕ್ಕಾಗಿ ಒದಗಿಸಲಾದ ಅನುದಾನವೆಷ್ಟು?" ದಯಮಾಡಿ ಅದನ್ನೂ ಒಟ್ಟಿಗೆ ಸೇರಿಸಿ ಒಂದು ಗಂಟೆ ಕಾಲಾವಕಾಶದ ಚರ್ಚೆಗೆ ಅವಕಾಶ ಕೊಡಿ. ಏಕೆಂದರೆ, ನೀರಾವರಿ ಮಂತ್ರಿಗಳು ಸಮರ್ಥರಾಗಿರುವಾಗ ದಯಮಾಡಿ ಅಧ್ಯಕ್ಷರು ಅವಕಾಶ ಕಲ್ಪಿಸಿಕೊಡಬೇಕು.

ಅಧ್ಯಕ್ಷರು: ಆಯಿತು, ಕೊಡೋಣವಂತೆ.

ಶ್ರೀ ಬಸವರಾಜ ಬೊಮ್ಮಾಯಿ: ಸಭಾಧ್ಯಕ್ಷರೆ, ತಪ್ಪು ಮಾಹಿತಿ ಹೋಗಬಾರದು. ಅವರ ಉದ್ದೇಶವೇನಿದೆ, ಎಲ್ಲಾ ವಲಯಗಳಿಗೆ ಏನು ನಾವು ಹಂಚಿಕೆ ಮಾಡಿದ್ದೇವೆ, ಅದನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ. ಈಗ ಇದನ್ನು ಬೇಕಾದರೆ ಮುಂದಕ್ಕೆ ಹಾಕಿ. ನೀರಾವರಿ ನಿಗಮದ ಎಲ್ಲಾ ವಲಯಗಳಿಗೆ ಸಂಬಂಧಿಸಿದಂತೆ ಎಲ್ಲಾ ವಿವರಗಳನ್ನೂ ನಾನು ಒದಗಿಸಿಕೊಡುತ್ತೇನೆ.

ಅಧ್ಯಕ್ಷರು: ಸ್ಪಷ್ಟೀಕರಣ ಕೇಳಿ ಒಂದು ಲೇಟರ್ ಕೊಡಿ. ನಾನು ಕಳುಹಿಸಿಕೊಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: Writing ಕೊಡಿ, ನಾನು ಮಾಹಿತಿ ಒದಗಿಸಿಕೊಡುವುದಕ್ಕೆ ಸಿದ್ದನಿದ್ದೇನೆ.

ಅಧ್ಯಕ್ಷರು: ಆಯಿತು, ನೀವು ಅದನ್ನು ಸ್ಪಷ್ಟೀಕರಣ ಮಾಡಿ ಲೆಟರ್ ಕೊಡಿ. ಸಿ.ಸಿ.ಪಾಟೀಲರೆ, ನೀವು ಕುಳಿತುಕೊಳ್ಳಿ. ನಾವೆಲ್ಲರೂ ಕೇಳುತ್ತೇವೆ. ಪುಟ್ಟೇಗೌಡರೆ, ಆ ಸ್ಪಷ್ಟೀಕರಣ ಕೊಟ್ಟು, ಒಂದು ಲೆಟರ್ ಕೊಡಿ.

ಶ್ರೀ ಸಿ.ಎಸ್.ಪುಟ್ಟೇಗೌಡ: ಪ್ರಿಂಟ್ ಆಗಿರುವುದು ತಪ್ಪಾಗಿದೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಸ್.ಸುರೇಶ್‌ಕುಮಾರ್: ಪುಟ್ಟೇಗೌಡರು ಮಾತನಾಡುತ್ತಾ, ಪ್ರಿಂಟ್ ಮಾಡುವುದರಲ್ಲಿ, ಟೈಪ್ ಮಾಡುವುದರಲ್ಲಿ ತಪ್ಪಾಗಿದೆಯೆಂದು ಹೇಳಿದರು. ಹೀಗೆ ಒಂದು ಪರೀಕ್ಷೆಯಲ್ಲಿ ಒಂದು ಪ್ರಶ್ನೆ ಕೇಳಿದರಂತೆ. ಮೊದಲನೆಯ ಪ್ರಶ್ನೆ: ಪ್ರಪಂಚದಲ್ಲಿರುವ ವಲಯಗಳೆಷ್ಟು? ಎರಡನೆಯ ಪ್ರಶ್ನೆ: ಪ್ರಪಂಚದಲ್ಲಿರುವ ಮೂರು ವಲಯಗಳ ಹೆಸರೇನು? ಮೂರನೆಯ ಪ್ರಶ್ನೆ: ಉಷ್ಣ ವಲಯ, ಶೀತ ವಲಯ ಮತ್ತು ಸಮ ಶೀತೋಷ್ಣ ವಲಯಗಳ ನಡುವಿನ ವ್ಯತ್ಯಾಸವೇನು ಎಂದು. ಆ ರೀತಿ ಕೇಳಿದ್ದರೆ, ಒಂದನೇ ಪ್ರಶ್ನೆಗೆ ಎರಡನೇ ಪ್ರಶ್ನೆ ಉತ್ತರ, ಎರಡನೇ ಪ್ರಶ್ನೆಗೆ ಮೂರನೇ ಪ್ರಶ್ನೆ ಉತ್ತರ ಎಂದು ಕೊಡಬಹುದಾಗಿತ್ತು! ಮಿಸ್ಟೇಕ್ ಆಗಿದೆ.

ಸಣ್ಣ ನೀರಾವರಿ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ

43(167)

ಶ್ರೀ ಸಿದ್ದು ಸವದಿ(ತೇರವಾಳ)

ಗೋವಿಂದ ಎಂ.ಕಾರಜೋಳ(ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು)

ಅ) 2009–10ನೆ ಸಾಲಿಗೆ ಸಣ್ಣ ನೀರಾವರಿ ಇಲಾಕೆಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು;

- 2009–10ನೇ ಆಯವ್ಯಯದಲ್ಲಿ ಲಭ್ಯವಾಗಿರುವ ಅನುದಾನದಿಂದ ಈಗಾಗಲೇ ಹಿಂದಿನ ಸಾಲುಗಳಲ್ಲಿ ಕೈಗೊಂಡು ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಮುಂದುವರೆಸುವುದು. ಅಲ್ಲದೆ, ಹೊಸಕರೆಗಳು, ಬಾಂದಾರಗಳು, ಪಿಕಪ್‌ಗಳು, ಏತ ನೀರಾವರಿ ಯೋಜನೆಗಳು, ಪ್ರವಾಹ ನಿಯಂತ್ರಣ ಕಾಮಗಾರಿಗಳು, ಅಸ್ತಿತ್ವದಲ್ಲಿರುವ